# ಅಸ್ಥಿರತೆಯ ನಡುವೆಯೇ ಆಶಾವಾದ

2021 ಹೇಗಿತ್ತು ಎಂದರೆ, ಮರೆತು ಬಿಡುವಷ್ಟು ಸುಲಭವಾಗಿಯೂ, ನೆನಪಿನಲ್ಲಿ ಇಟ್ಟುಕೊಳ್ಳುವಷ್ಟು ಸೊಗಸಾಗಿಯೂ ಇರಲಿಲ್ಲ ಎನ್ನುವುದೊಂದೇ ಉತ್ತರ.

2020ರ ಮುಂದುವರೆದ ಭಾಗದಂತೆಯೇ ಶುರುವಾದ 2021ರಲ್ಲಿ ಅದೇ ಆತಂಕ, ಅದೇ ಹಿಂಜರಿಕೆ, ಅದೇ ಅಸ್ಥಿರತೆ... ಇದರ ನಡುವೆಯೂ ಬದುಕಬೇಕು, ಬದುಕಲು ಏನಾದರೂ ಮಾಡಲೇಬೇಕು ಎನ್ನುವ ಅನಿವಾರ್ಯ. ಈ ಅನಿವಾರ್ಯದಲ್ಲೇ ಕಳೆದುಕೊಂಡ 2020ರ ನೆನಪು. ಈ ವರ್ಷವಾದರೂ ಗಟ್ಟಿಯಾದದ್ದು ಏನಾದರೂ ಮಾಡಲೇಬೇಕೆಂಬ ಚಡಪಡಿಕೆ, ತಲ್ಲಣ.

ಇಷ್ಟೆಲ್ಲಾ ತಳಮಳಗಳ ಮಧ್ಯೆ ನನ್ನ ಮೂರನೇ ಸಿನಿಮಾ 'ಮ್ಯಾನ್ ಆಫ್ ದಿ ಮ್ಯಾಚ್' ಚಿತ್ರಕಥೆಯನ್ನು ಬರೆದು ಮುಗಿಸಿ ಏಪ್ರಿಲ್‌ನಲ್ಲಿ ಶೂಟಿಂಗೂ ಶುರುಮಾಡಿದೆವು. ಅಷ್ಟೊತ್ತಿಗಾಗಲೇ ಕೊರೊನಾ ಎನ್ನುವ ಒಂದು ವರ್ಷದ ಹಳೆಯ ಬಾಣ ಇನ್ನು ಹಾರುತ್ತಲೇ ಇದೆ ಮತ್ತು ಅದು ಹೆಚ್ಚಾಗುತ್ತಿದೆ ಎನ್ನುವ ಸುದ್ದಿ ಎಲ್ಲೆಡೆಯೂ ಹಬ್ಬತೊಡಗಿತ್ತು. ಯಾವಾಗ ಬೇಕಾದರೂ ಮತ್ತೊಮ್ಮೆ ಲಾಕ್‌ಡೌನ್ ಮಾಡಿಬಿಡಬಹುದೆಂಬ ಸುದ್ದಿ ಕಿವಿಗೆ ಬೀಳುತ್ತಲೇ ಶೂಟಿಂಗ್ ಕೆಲಸಗಳನ್ನು ಅತಿವೇಗವಾಗಿ ಮಾಡಲು ಇಡೀ ಚಿತ್ರತಂಡ ನನ್ನೊಂದಿಗೆ ಕೈ ಜೋಡಿಸಿ ಕೆಲಸಕ್ಕಿಳಿಯಿತು. ಆದರೂ ಇನ್ನೇನು ಶೂಟಿಂಗ್ ಮುಗಿಸಿಬಿಡುತ್ತೇವೆ ಎನ್ನುವ ಹೊತ್ತಿಗೆ ಎರಡನೇ ಲಾಕ್‌ಡೌನ್ ಘೋಷಿಸಿಯಾಗಿತ್ತು.

ಮೊದಲ ಅಲೆಗಿಂತ ಅತಿ ಹೆಚ್ಚೇ ಎನ್ನಬಹುದಾದ ಬಲಶಾಲಿಯಾಗಿದ್ದ ಎರಡನೇ ಅಲೆಗೆ ಇಡೀ ಸಮಾಜವೇ ತಲ್ಲಣಿಸಿ ಹೋಗಿತ್ತು. ತೀರಾ ಆಪ್ತರೆನಿಸಿದ, ನೆನ್ನೆ ಮೊನ್ನೆಯವರೆಗೂ ಮೆಸೇಜುಗಳನ್ನು ಕಳಿಸುತ್ತಿದ್ದ, ಪ್ರತಿದಿನ ಒಂದಲ್ಲಾ ಒಂದು ವಿಷಯವನ್ನು ಚರ್ಚಿಸುತ್ತಿದ್ದ, ಸ್ನೇಹಿತರು, ಬಂಧುಗಳನ್ನು ಕಳೆದುಕೊಂಡು 2021 ಏಕಾದರೂ ಬಂತೋ ಎಂದು ಅನಿಸಿತು.

'ಧರೆಯೆ ಹತ್ತಿ ಉರಿಯುವಾಗ ಬದುಕಲೆಲ್ಲಿ ಓಡುವೆ' ಎನ್ನುವ ಚಿ. ಉದಯಶಂಕರ್ ಅವರ ಸಾಲುಗಳನ್ನು ನನಗೇ ತಿಳಿಯದಂತೆ ಗುನುಗಿಕೊಂಡದ್ದೂ ಅದೆಷ್ಟೋ ಬಾರಿ. ಕತ್ತಲೆಯ ಹಿಂದೆ ಬೆಳಕು ಬರುವಂತೆ ಕೊರೊನಾ ಎರಡನೆಯ ಅಲೆಯ ಏರಿಳಿತಗಳು ಒಂದು ಹಂತಕ್ಕೆ ಬಂದು ಮತ್ತೊಮ್ಮೆ ನಿಂತ ಕೆಲಸಗಳನ್ನು ಶುರುಮಾಡಿದಾಗಲೂ ಹುರುಪಿಗಿಂತಲೂ ಹೆಚ್ಚಾಗಿ ಸಲೀಸಾಗಿ ಮುಗಿಸಿದರೆ ಸಾಕು ಎನ್ನುವ ಭಾವವೇ ಎಲ್ಲರಲ್ಲೂ ಮನೆಮಾಡಿತ್ತು. ಉಳಿದ ಶೂಟಿಂಗ್ ಕೆಲಸಗಳನ್ನು ಮುಗಿಸಿ ಸಿನಿಮಾ ಮುಂದಿನ ಕೆಲಸಗಳು ಪ್ರಾರಂಭವಾದವು.

ಪರಿಸರದಲ್ಲಿ ಎಲ್ಲವೂ ಮಾಮೂಲಿನಂತೆ, ಮೊದಲಿನಂತೆ ಅನಿಸಿದ್ದರೂ ಜೀವಂತಿಕೆಯನ್ನು ಪುನಃ ಪಡೆಯಲು ಒದ್ದಾಡುತ್ತಿರುವ ಸ್ಪಷ್ಟ ಚಿತ್ರಣ ಎಲ್ಲದರಲ್ಲಿಯೂ ಎಲ್ಲರಲ್ಲಿಯೂ ಕಾಣಿಸತೊಡಗಿತ್ತು. ಯಾವುದೂ ಮುಕ್ತ ಇಲ್ಲ, ಯಾವ ಕೆಲಸದಲ್ಲಿಯೂ ಪೂರ್ಣ ತನ್ಮಯತೆಯಿಲ್ಲ, ಮನುಷ್ಯ ಸಂಘಜೀವಿ ಎನ್ನುವ ರೂಪಕವೇ ಅಳಿಸಿಹೋಗಿ ಮನುಷ್ಯ 6 ಅಡಿ ಅಂತರದಲ್ಲಿರುವ ಮತ್ತೊಂದು ಜೀವಿ ಎನ್ನುವಷ್ಟರ ಮಟ್ಟಿಗೆ ಜನ ಒಬ್ಬರನ್ನೊಬ್ಬರು ಸಂಧಿಸಿದಾಗ ಅನುಭವಿಸುತ್ತಿದ್ದ ಮುಜುಗರಗಳು ಎದ್ದುಕಾಣುತ್ತಿತ್ತು.

ಇಷ್ಟೊತ್ತಿಗಾಗಲೇ ನನ್ನ ಸಿನಿಮಾ ಕೆಲಸಗಳು ಮುಗಿದಿದ್ದು ಅದನ್ನು ಅಪ್ಪು ಸರ್ ಅವರ 'ಪಿಆರ್‌ಕೆ' ಬ್ಯಾನರಿನಡಿ ಒಟಿಟಿಯಲ್ಲಿ ರಿಲೀಸ್ ಮಾಡುವ ಮಾತುಗತೆಗಳೂ ನಿರಂತರವಾಗಿ ನಡೆದು, ಬಿಡುಗಡೆಯ ದಿನಾಂಕವೂ ನಿಗದಿಯಾಯಿತು.

ಅಪ್ಪು ಸರ್ ಅವರ ಆಗಮನ ಇಡೀ ತಂಡಕ್ಕೆ ಒಂದು ಹೊಸ ಹುರುಪು, ಚೈತನ್ಯ. ಅವರ ಮುಂದಾಲೋಚನೆಗಳು, ಹೊಸಬರು ಹೆಚ್ಚಾಗಿ ಬರಬೇಕು, ಕಥೆಯಾದಾರಿತ ಸಿನಿಮಾಗಳು ನಿರಂತರವಾಗಿ ನಿರ್ಮಾಣಗೊಳ್ಳಬೇಕು, ವರ್ಷಕ್ಕೆ 10 ಒಳ್ಳೆ ಕತೆಯುಳ್ಳ ಸಿನಿಮಾಗಳು ನಮ್ಮ ಪಿಆರ್‌ಕೆ ಬ್ಯಾನರಿನಲ್ಲಿ ತಯಾರಾಗಬೇಕು, ನಮ್ಮ ಕನ್ನಡ ಸಿನಿಮಾದ ವಿಷಯ ವಸ್ತುಗಳ ಬಗ್ಗೆ ಎಲ್ಲೆಡೆಯೂ ಚರ್ಚೆಗಳಾಗಬೇಕು. ತಾಂತ್ರಿಕವಾಗಿ ನಮ್ಮ ಸಿನಿಮಾಗಳು ಯಾವ ಭಾಷೆಯ ಸಿನಿಮಾಗಳಿಗೂ ಕಮ್ಮಿಯಿರಬಾರದು. ಹಾಗೂ ನಾನೂ ಕೂಡ ವರ್ಷಕ್ಕೆ ಒಂದರಂತೆ ಹೊಸ ಪ್ರಯೋಗಗಳ ಜೊತೆ ಹೊಸ ಪಾತ್ರಗಳ ಜೊತೆ ಜನರ ಮುಂದೆ ಬರಬೇಕು, ಹೀಗೆ ನಾನಾ ಕನಸುಗಳೊಂದಿಗೆ ಅವರೊಂದಿಗೆ ಕಳೆದ ಚರ್ಚೆಗಳು, ಅದನ್ನು ಸಾಕಾರಗೊಳಿಸಲು ಮಾಡಬೇಕಾದ ತ್ವರಿತ ಕೆಲಸಗಳ ಪಟ್ಟಿ, ಹೀಗೆ ಕಳೆದ ದಿನಗಳು, ಸಮಯಗಳು 2021ರ ಅತ್ಯಮೂಲ್ಯ ಸಮಯ.




ಕನ್ನಡ ಚಿತ್ರರಂಗದ ಹಣೆ ಬರಹವೇ ಸರಿಯಿಲ್ಲ ಎಂದನಿಸಿದ್ದು ಅಪ್ಪು ಅವರು ನಮ್ಮನ್ನು ಅಗಲಿದ ದಿನ. ಎಷ್ಟೊ ಹೊಸಬರಿಗೆ, ಎಷ್ಟೋ ಹೊಸ ಚಿಂತನೆಗಳಿಗೆ, ಎಷ್ಟೊ ಹೊಸ ಯೋಜನೆಗಳಿಗೆ, ನೀರಾಗಿ, ಬೇರಾಗಿ, ಮರವಾಗಿ, ನೆರಳಾಗಿದ್ದ ಅಪ್ಪು ಸರ್ ಇನ್ನಿಲ್ಲ ಎಂದಾಗ ಸ್ಪಷ್ಟವಾಗಿ ಗೋಚರಿದ್ದು ಒಣಗಿದ, ಬಳಲಿದ ಕನಸೆಲ್ಲಾ ಬರಡಾದ ಹೊಸತನಕ್ಕೆ ಹಾತೊರೆಯುತ್ತಿದ್ದ ಕನ್ನಡದ ಯುವ ಮನಸ್ಸುಗಳು.

ಮುಂದೇನು ಎನ್ನುವುದು ತಿಳಿದಿಲ್ಲ, ತಿಳಿದು ಮಾಡುವುದಾದರೂ ಏನು ಎನ್ನುವಷ್ಟರ ಮಟ್ಟಿಗೆ ಮನಸ್ಸು ತತ್ವಜ್ಞಾನಿಯಂತೆ ವರ್ತಿಸುತ್ತಿದೆ. ನೋವಲ್ಲಿ, ನಲಿವಲ್ಲಿ ಪಾಲ್ಗೊಳುತ್ತಿದ್ದ ಹೃದಯ ಈಗೀಗ ಎಲ್ಲವನ್ನೂ ಸುಮ್ಮನೆ ನಿಂತು ನೋಡುವುದನ್ನು ಅಭ್ಯಾಸ ಮಾಡಿಕೊಳ್ಳುತ್ತಿರುವಂತಿದೆ. ಇದು ಹಿಂದೆಂದೂ ಆಗಿರದ ವಿಷಯವೇನಲ್ಲ, ಭೂಮಿಯಲ್ಲಿ ಎಲ್ಲವೂ ಸರ್ವೇಸಾಮಾನ್ಯ, ನಮಗಿದು ಹೊಸದು ಎಂದು ತಿಳಿದಿದ್ದರೂ ಅದನ್ನು ಒಪ್ಪಿಕೊಳ್ಳಲು ಒಪ್ಪಿಕೊಂಡು ಮುಂದೆ ಹೋಗಲು ಸ್ವಲ್ಪ ಸಮಯ ಬೇಕೆನ್ನುತ್ತಿದೆ ತಲೆ.

2021 ಹೇಗಿತ್ತು ಎಂದರೆ, ಮರೆತು ಬಿಡುವಷ್ಟು ಸುಲಭವಾಗಿಯೂ, ನೆನಪಿನಲ್ಲಿ ಇಟ್ಟುಕೊಳ್ಳುವಷ್ಟು ಸೊಗಸಾಗಿಯೂ ಇರಲಿಲ್ಲ ಎನ್ನುವುದೊಂದೇ ಉತ್ತರ...

**–ಡಿ. ಸತ್ಯಪ್ರಕಾಶ್, ನಿರ್ದೇಶಕ**

ಅವರ 'ಕೃಷ್ಣ ಟಾಕೀಸ್' ಸಿನಿಮಾವೇ ಕೊನೆ. ಮತ್ತೆ ಚಿತ್ರಮಂದಿರ ಪ್ರದರ್ಶನಕ್ಕೆ ನಿರ್ಬಂಧ ಶುರುವಾಯ್ತು. ಥಿಯೇಟರ್‌ಗಳ ಕಾಂಪೌಂಡ್ ಗೇಟಿಗೆ ಮತ್ತೆ ಬೀಗ ಬಿತ್ತು. ಕಟೌಟ್‌ಗಳ ಮೇಲಿನ ಹೂವಿನ ಹಾರ ಒಣಗತೊಡಗಿದವು.

## ಒಟಿಟಿಯಲ್ಲಿ ಸಿನಿಮಾ ದಾರಿ

ಮೇ ಮತ್ತು ಜೂನ್, ಎರಡೂ ತಿಂಗಳು ಚಿತ್ರಮಂದಿರ ಸ್ಥಗಿತವಾಗಿಯೇ ಇತ್ತು. ಜುಲೈ ತಿಂಗಳಲ್ಲಿ ಸಿನಿಮಾ ಕಲವರ ಮತ್ತೆ ಶುರುವಾಯ್ತು. ಆದರೆ ಈ ಸಲ ಚಿತ್ರಮಂದಿರದಲ್ಲಲ್ಲ, ಒಟಿಟಿ ವೇದಿಕೆಗಳಲ್ಲಿ. ಜುಲೈ 12ಕ್ಕೆ 'ಶಿ' ಎಂಬ ಸಿನಿಮಾ ಎಮ್‌ಎಕ್ಸ್ ಪ್ಲೇಯರ್‌ನಲ್ಲಿ ಬಿಡುಗಡೆಯಾಯಿತು. ಆದರೆ ಇದು ಬಿಡುಗಡೆಯಾಗಿದ್ದು ಗೊತ್ತಾಗಿದ್ದೇ ಬೆರಳೆಣಿಕೆಯ ಮಂದಿಗೆ.

ಪಿಆರ್‌ಕೆ ಪ್ರೊಡಕ್ಷನ್ಸ್, ಹೊಂಬಾಳೆ ಫಿಲ್ಮ್ಸ್‌ನಂಥ ಕೆಲವೇ ಕೆಲವರ ಹೊರತಾಗಿ ಅಮೆಜಾನ್ ಪ್ರೈಮ್ ಕನ್ನಡ ಸಿನಿಮಾಗಳ ಪಾಲಿಗೆ ಬಾಗಿಲು ಮುಚ್ಚಿದೆ ಎಂಬ ಮಾತುಗಳು ಕೇಳಿಬರುತ್ತಿರುವ ಹೊತ್ತಿಗೇ 'ಇಕ್ಕಟ್' ಎಂಬ ಸಿನಿಮಾ ಪ್ರೈಮ್‌ನಲ್ಲಿ ನೇರವಾಗಿ ಬಿಡುಗಡೆಯಾಗುತ್ತಿರುವ ಸುದ್ದಿ ಹೊರಬಿದ್ದಿತ್ತು. ಯಾವ ದೊಡ್ಡ ನಟರೂ ಇಲ್ಲ, ಹೆಸರಾಂತ ನಿರ್ದೇಶಕರಿಲ್ಲದ ಈ ಸಿನಿಮಾವನ್ನು ಅಮೆಜಾನ್ ಪ್ರೈಮ್ ಖರೀದಿಸಿರುವ ಬಗ್ಗೆ ಗಾಂಧಿನಗರದ ಮಂದಿ ಬಿಡಿ, ಸ್ವತಃ ಚಿತ್ರತಂಡದಲ್ಲಿಯೇ ಕೆಲವರಿಗೆ ಅಚ್ಚರಿಯಾಗಿತ್ತು. ಇಶಾಮ್ ಖಾನ್ – ಹಸೀನ್ ಖಾನ್ ಸಹೋದರರು ಜೋಡಿಯಾಗಿ ಆ್ಯಕ್ಷನ್ ಕಟ್ ಹೇಳಿದ್ದ, ನಾಗಭೂಷಣ್ ಎನ್.ಎಸ್. ಮತ್ತು ಭೂಮಿ ಶೆಟ್ಟಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದ ಆ ಸಿನಿಮಾ ಜುಲೈ 20ರಂದು ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾದಾಗ ಜನರು ಚೆನ್ನಾಗಿಯೇ ಪ್ರತಿಕ್ರಿಯಿಸಿದ್ದರು. ಲಾಕ್‌ಡೌನ್‌ನಲ್ಲಿ ಬಿಗುಗೊಂಡ ಅವರ ಮನಸ್ಸಿಗೆ ನಗೆಯ ಸಿಂಚನ